# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಅಂಕೋಲಾ

## ಸಿಸಿ ನಂಬರ 679/2025

| | |
|---|---|
| ಆರೋಪಿಯ ಹೆಸರುಃ | ಶ್ರೀ ಪ್ರವೀಣ ಎಸ್ ರಾಯಕರ |
| ವಯಸ್ಸುಃ | 38 |
| ವೃತ್ತಿಃ | ಅಕ್ಕಸಾಲಿಗ |
| ವಿಳಾಸಃ | ಸಾಃ 3 ನೇ ಮುಖ್ಯ ರಸ್ತೆ, 15 ನೇ ಕ್ರಾಸ್,<br>ವಿನೋದ ನಗರ, ಅಮೃತಾ ವಿದ್ಯಾಲಮ ಶಾಲೆ ಹತ್ತಿರ,<br>ದಾವಣಗೆರೆ |

## ಬಿ.ಎನ್ ಎಸ್.ಎಸ್. ಕಲಂ 313 ರೀತ್ಯಾ ಆರೋಪಿ ಹೇಳಿಕೆ

ಪ್ರ 1ಃ ನೀವು ಅಭಿಯೋಜನೆ ಪರ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ

ಪ್ರ 2ಃ ಪಿಡಬ್ಲ್ಯೂ 1 : ರಾಜೇಶ ಜೆ ಪಾಲನಕರ ರವರು ತಮ್ಮ ಸಾಕ್ಷಿಯಲ್ಲಿ ಫಿರ್ಯಾದಿಯು ಆರೋಪಿಗೆ 14 ರಿಂದ 15 ಲಕ್ಷದ ಮೊತ್ತದ ಚಿನ್ನವನ್ನು ಕೂಡಲೇ ಸರಬರಾಜು ಮಾಡಬೇಕೆಂದು ತಿಳಿಸಿ, ಒಡಂಬಡಿಕೆ ಪತ್ರವನ್ನು ಮಾಡಿಕೊಂಡು ಆರೋಪಿಗೆ ಹಂತ ಹಂತವಾಗಿ ಅಕ್ಟೋಬರ್ 2024 ರವರೆಗೆ ಒಟ್ಟೂ ರೂ. 14,40,000/- ಗಳನ್ನು ತಲುಪಿಸಿದ್ದು ಇರುತ್ತದೆ. ಅದರಂತೆ ಫಿರ್ಯಾದಿಯು ಆರೋಪಿಗೆ 2024 ರ ಡಿಸೆಂಬರ ಅಂತ್ಯದ ಒಳಗಾಗಿ ಒಟ್ಟೂ ರೂ. 14,40,000/- ಮೌಲ್ಯದ ಚಿನ್ನವನ್ನು ಸರಬರಾಜು ಮಾಡಬೇಕೆಂದು ಆರೋಪಿಗೆ ತಿಳಿಸಿದಾಗ ಆರೋಪಿಯು ಒಪ್ಪಿಕೊಂಡು 2024 ರ ಡಿಸೆಂಬರ ತಿಂಗಳ ಒಳಗಾಗಿ ಒಟ್ಟೂ ಚಿನ್ನವನ್ನು ಸರಬರಾಜು ಮಾಡುತ್ತೇನೆಂದು ಫಿರ್ಯಾದಿಗೆ ಆಶ್ವಾಸನೆ ನೀಡಿದ್ದು ಇರುತ್ತದೆ. ಆದರೆ ಆರೋಪಿಯು ಫಿರ್ಯಾದಿಗೆ ಆಶ್ವಾಸನೆ ನೀಡಿದ ಪ್ರಕಾರ ಚಿನ್ನವನ್ನು ಪೂರೈಸಿದ್ದಾಗಲೀ ಅಥವಾ ಫಿರ್ಯಾದಿಯಿಂದ ಪಡೆದುಕೊಂಡಂತಹ ರೂ.14,40,000/- ಹಣವನ್ನು ಫಿರ್ಯಾದಿಗೆ ಪರತ್ ಮಾಡಿದ್ದಾಗಲೀ ಇರುವುದಿಲ್ಲ. ಹೀಗಾಗಿ ಫಿರ್ಯಾದಿಯು

ಆರೋಪಿಯನ್ನು ಅನೇಕ ಬಾರಿ ಸಂಪರ್ಕಿಸಿ ಆರೋಪಿಗೆ ಚಿನ್ನವನ್ನು ಸರಬರಾಜು ಮಾಡಲು ಸಾಧ್ಯವಾಗದೇ ಇದ್ದಲ್ಲಿ ತನ್ನ ಹಣವನ್ನು ತನಗೆ ಕೂಡಲೇ ಮರಳಿಸಬೇಕು ಎಂದು ಒತ್ತಾಯಿಸಿದ ನಂತರ, ಆರೋಪಿತನು ಫಿರ್ಯಾದಿಗೆ ಎರಡು ಚೆಕ್ಕುಗಳನ್ನು ದಿಃ 25-03-2025 ರಂದು ಎಕ್ಸಿಸ್ ಬ್ಯಾಂಕ್, ಶಾಃ ದಾವಣಗೆರೆ ರವರಲ್ಲಿ ಹಣದ ಉಳಿತಾಯ ಖಾತೆ ಅಡಿಯಲ್ಲಿ 1) ಚೆಕ್ ನಂಃ 440439 ನ್ನು ರೂ. 7,20,000/- ಹಾಗೂ 2) ಚೆಕ್ ನಂ. 440440 ನ್ನು ರೂ. 7,20,000/- ಕ್ಕೆ ನೀಡಿರುತ್ತಾರೆ. ಸದರಿ ಆರೋಪಿತನು ನೀಡಿದ ಚೆಕಗಳನ್ನು ನಗಧೀಕರಣಕ್ಕೆ ಹಾಕಿದಾಗ '**Funds Insufficient'** ಎಂದು ಹಿಂಬರಹದೊಂದಿಗೆ ಪರತ್ ಬಂದಿರುತ್ತದೆ. ಈ ಕುರಿತಾಗಿ ಆರೋಪಿತನಿಗೆ ಮುಂಚಿತವಾಗಿ ನೋಟೀಸು ನೀಡಿದರೂ ಸಹ ಹಣ ಮರು ಪಾವತಿಸದೇ ಎನ್ ಐ ಆ್ಯಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 3ಃ ಈ ಪ್ರಕರಣದಲ್ಲಿ ಮತ್ತೇನಾದರೂ ಹೇಳುವುದಿದೆಯೆ?

ಉತ್ತರಃ

ಪ್ರ 4ಃ ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ ಹಾಗೂ ಏನಾದರೂ ಕಾಗದ ಪತ್ರವನ್ನು ಹಾಜರುಪಡಿಸುತ್ತೀರಾ?

ಉತ್ತರಃ

( ಆರೋಪಿತನಿಗೆ ಮೇಲಿನ ಪ್ರಶ್ನೆಗಳನ್ನು ಆತನಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

Sd/-

ದಿನಾಂಕಃ 11/11/2025.

**( ಅರ್ಪಿತಾ ಬಿ. ಬೆಲ್ಲದ)**

**ಹೆ ಪ್ರ ದ ನ್ಯಾದಂ, ಅಂಕೋಲಾ.**